ಸಂಪುಟ : 40 ಸಂಚಿಕೆ 131 ಫೋನ್ : 0816-2278198 | 2257588 | ಫ್ಯಾಕ್ಸ್ : 2273793 07 ಜೂನ್ 2017 ಬುಧವಾರ POST REG NO . L-2/RNP- 364/TMR/2015-17 ಪುಟಗಳು : 10 ಬೆಲೆ ₹ 2.50

ತುಮಕೂರು | ಚಿತ್ರದುರ್ಗ | ದಾವಣಗೆರೆ | ಹಾವೇರಿ | ಬಳ್ಳಾರಿ ಜಿಲ್ಲೆಗಳಲ್ಲಿ ಪ್ರಕಟಿತ

# ಪ್ರಜಾ ಪ್ರಗತಿ

ತುಮಕೂರು | Tumakuru

ಸಂಪಾದಕರು : ಎಸ್. ನಾಗಣ್ಣ

E-mail : prajapragathi1@gmail.com
Web : prajapragathi.com



**ಸಂವಿಧಾನ ರಕ್ಷಿಸುವ ರಾಷ್ಟ್ರಪತಿ ದೇಶಕ್ಕೆ ಬೇಕಾಗಿದೆ : ಸೋನಿಯಾಗಾಂಧಿ**



**ನೇಪಾಳದ 40ನೇ ಪ್ರಧಾನಿಯಾಗಿ ಶೇರ್ ಬಹದ್ದೂರ್ ದೆಬಾ ಆಯ್ಕೆ**

**ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್: ಇಂದು ಸಂಜೆ 6ಕ್ಕೆ ಪಾಕಿಸ್ತಾನ ದ.ಆಫ್ರಿಕಾ ನಡುವೆ ಪಂದ್ಯ**



₹55 Discount Per Gram
Gold 916 ₹ 2760/-
Silver ₹ 41600/-
ಸೂರ ಜ್ಯೂಯಲರ್ಸ್
Ashoka Road, Tumkur
Ph: 0816 4022274

## ಶುದ್ಧ ನೀರು ಸೇವನೆಯಿಂದ ಕಾಯಿಲೆ ತಡೆಗಟ್ಟಿ

### ಸೋಗೇನಹಳ್ಳಿ ಧಾರ್ಮಿಕ ಕಾರ್ಯಕ್ರಮದಲ್ಲಿ ಶಾಸಕ ಕೆ.ಎನ್.ರಾಜಣ್ಣ ಸಲಹೆ

**ಮಧುಗಿರಿ**

ಮಾನವನ ನೆಮ್ಮದಿಗೆ ಧಾರ್ಮಿಕ ಆಚರಣೆಗಳು ಅವಶ್ಯಕ. ದೇವಾಲಯಗಳಿಂದ ಹಿಂದಿನ ಪರಂಪರೆ ಹಾಗೂ ಸಂಸ್ಕೃತಿ ಕಾಣಲು ಸಾಧ್ಯವಾಗಿದೆ ಎಂದು ಶಾಸಕ ಕೆ.ಎನ್.ರಾಜಣ್ಣ ತಿಳಿಸಿದರು.

ಕಸಬಾ ಹೋಬಳಿ ಬಿಜವರ ಗ್ರಾ.ಪಂ. ವ್ಯಾಪ್ತಿಯ ಸೋಗೇನಹಳ್ಳಿ ಗ್ರಾಮದಲ್ಲಿ ಶ್ರೀ ಮಹದೇಶ್ವರ ಸ್ವಾಮಿ ನೂತನ ಕಟ್ಟಡದ ಶಂಕುಸ್ಥಾಪನೆ ಹಾಗೂ ಶುದ್ಧ ಕುಡಿಯುವ ನೀರಿನ ಘಟಕದ ಉದ್ಘಾಟನೆ ನೆರವೇರಿಸಿ ಮಾತನಾಡಿದರು. ಆಧುನಿಕತೆಯಿಂದ ಮನುಷ್ಯನಿಗೆ ಸುಖ-ಸಂತೋಷ ದೊರೆತರೂ ಶಾಂತಿ-ನೆಮ್ಮದಿಯಿಂದ ಬಾಳಲು ದೇವಸ್ಥಾನಗಳ ಮೊರೆ ಹೋಗುತ್ತಿದ್ದಾನೆ. ದೇವಾಲಯ ಕಟ್ಟಡ ಪೂರ್ಣಗೊಳಿಸಲು ಸಂಪೂರ್ಣ ಸಹಕಾರ ನೀಡುವುದಾಗಿ ತಿಳಿಸಿದ ಅವರು, ಮುಖ್ಯ ರಸ್ತೆಯಿಂದ ಸೋಗೇನಹಳ್ಳಿ ಗೊಲ್ಲರಹಟ್ಟಿಯವರೆಗೆ ಉತ್ತಮ ಡಾಂಬರ್ ರಸ್ತೆ ನಿರ್ಮಿಸಲಾಗುವುದು. ವಿಶಾಲವಾದ ರಸ್ತೆ ನಿರ್ಮಿಸಲು ಅಕ್ಕ ಪಕ್ಕದ ಜಮೀನಿನ ಮಾಲೀಕರು ಸ್ಥಳ ಬಿಟ್ಟುಕೊಡಿ, ಮುಂದಿನ ದಿನಗಳಲ್ಲಿ ಸರಕಾರಿ ಬಸ್ ಸೌಲಭ್ಯವನ್ನು ಈ ಗ್ರಾಮಕ್ಕೂ ಒದಗಿಸಲಾಗುವುದು ಎಂದರು.

ತಾಲ್ಲೂಕಿನಲ್ಲಿ 1ನೇ ತರಗತಿಯಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಗ್ರಾ.ಪಂ. ವತಿಯಿಂದ ಉಚಿತ ನೋಟ್ ಪುಸ್ತಕಗಳನ್ನು ನೀಡಲಾಗುತ್ತಿದೆ. ಕಲುಷಿತ ನೀರು ಸೇವನೆಯಿಂದ ಹಲವಾರು ಕಾಯಿಲೆಗಳು ಕಾಣಿಸಿಕೊಳ್ಳುತ್ತವೆ. ಗ್ರಾಮಸ್ಥರು ಶುದ್ಧ ಕುಡಿಯುವ ನೀರನ್ನೆ ಬಳಸುವಂತೆ ತಿಳಿಸಿದರು. ರಾಜಕೀಯ ಅಧಿಕಾರ ಸಿಗುವುದು ಪೂರ್ವ ಜನುಮದ ಪುಣ್ಯ, ಕನ್ಯಾದಾನ ಮಾಡುವಾಗ ವರನ ಪೂರ್ವಾಪರಗಳನ್ನು ವಿಚಾರಿಸುವಂತೆ ಚುನಾವಣೆಯಲ್ಲಿ ಮತದಾನ ಮಾಡುವಾಗ ಸೋಮಾರಿಗಳು, ಪಿಕ್ ಪಾಕೆಟರ್‌ಗಳು, ಅಧಿಕಾರವನ್ನು ಸ್ವಾರ್ಥಕ್ಕಾಗಿ ಬಳಸಿಕೊಳ್ಳುವ ಅಭ್ಯರ್ಥಿಗಳ ಬಗ್ಗೆ ಜಾಗೃತರಾಗಿರಿ. ನನಗೆ ಅಧಿಕಾರ ಕೊಟ್ಟ ಮತದಾರರಿಗೆ ಗೌರವ ತಂದು ಕೊಡುವ ಕೆಲಸ ಮಾಡಿದ್ದೇನೆ ಎಂದರು.

ಸಂಸದ ಎಸ್.ಪಿ.ಮುದ್ದಹನುಮೇಗೌಡ ಮಾತನಾಡಿ ದೇವರ ಮೂರ್ತಿ ಏಕಾಗ್ರತೆಗೆ ಸ್ಪೂರ್ತಿ, ದೇವಸ್ಥಾನ ನಿರ್ಮಾಣದಲ್ಲಿ ಎಲ್ಲಾ ಭಕ್ತಾದಿಗಳ ಸಹ ಭಾಗಿತ್ವವಿರಬೇಕು. ಗ್ರಾಮದಲ್ಲಿ ಸಮುದಾಯ ಭವನ ನಿರ್ಮಿಸಲು ಮುಂದಾದರೆ ಅನುದಾನ ನೀಡುವುದಾಗಿ ತಿಳಿಸಿದರು. ತುಮುಲ್ ಅಧ್ಯಕ್ಷ ಕೊಂಡವಾಡಿ

>>> 6ನೇ ಪುಟಕ್ಕೆ

**ರಾಜಕೀಯ ಅಧಿಕಾರ ಸಿಗುವುದು ಪೂರ್ವ ಜನುಮದ ಪುಣ್ಯ, ಕನ್ಯಾದಾನ ಮಾಡುವಾಗ ವರನ ಪೂರ್ವಾಪರಗಳನ್ನು ವಿಚಾರಿಸುವಂತೆ ಚುನಾವಣೆಯಲ್ಲಿ ಮತದಾನ ಮಾಡುವಾಗ ಸೋಮಾರಿಗಳು, ಪಿಕ್ ಪಾಕೆಟರ್‌ಗಳು, ಅಧಿಕಾರವನ್ನು ಸ್ವಾರ್ಥಕ್ಕಾಗಿ ಬಳಸಿಕೊಳ್ಳುವ ಅಭ್ಯರ್ಥಿಗಳ ಬಗ್ಗೆ ಜಾಗೃತರಾಗಿರಿ. ನನಗೆ ಅಧಿಕಾರ ಕೊಟ್ಟ ಮತದಾರರಿಗೆ ಗೌರವ ತಂದು ಕೊಡುವ ಕೆಲಸ ಮಾಡಿದ್ದೇನೆ.**

**-ಕೆ.ಎನ್.ರಾಜಣ್ಣ, ಶಾಸಕ**



ಮಧುಗಿರಿ ಕಸಬಾ ಹೋಬಳಿ ಬಿಜವರ ಗ್ರಾ.ಪಂ ವ್ಯಾಪ್ತಿಯ ಸೋಗೇನಹಳ್ಳಿ ಗ್ರಾಮದಲ್ಲಿ ಶ್ರೀ ಮಹದೇಶ್ವರ ಸ್ವಾಮಿ ನೂತನ ಕಟ್ಟಡ ನಿರ್ಮಾಣದ ಕಾಮಗಾರಿಯ ಕಾರ್ಯಕ್ರಮದಲ್ಲಿ ಶಾಸಕ ಕೆ.ಎನ್.ರಾಜಣ್ಣ, ಸಂಸದ ಎಸ್.ಪಿ.ಮುದ್ದಹನುಮೇಗೌಡ, ತುಮುಲ್ ಚಂದ್ರಶೇಖರ್ ಇತರರಿದ್ದರು.

## ಇಂದು ಸಿದ್ದಗಂಗಾ ಶ್ರೀಗಳಿಗೆ 'ಸಾರ್ವಭೌಮ' ಪ್ರಶಸ್ತಿ ಪ್ರದಾನ

**ತುಮಕೂರು:** ಗೋಕರ್ಣ ಶ್ರೀ ಸಾರ್ವಭೌಮ ಮಹಾಬಲೇಶ್ವರ ದೇವರ ಅನುಗ್ರಹ ರೂಪವಗಿ ಪ್ರತಿವರ್ಷ ಕೊಡ ಮಾಡುವ 'ಸಾರ್ವಭೌಮ ಪ್ರಶಸ್ತಿಯನ್ನು ಈ ಬಾರಿ ಸಿದ್ಧಗಂಗಾ ಮಠದ ಡಾ.ಶ್ರೀ ಶಿವಕುಮಾರ ಮಹಾಸ್ವಾಮಿಗಳವರಿಗೆ ನೀಡಲಾಗುತ್ತಿದ್ದು, ಈ ಪ್ರಶಸ್ತಿ ಪ್ರದಾನ ಸಮಾರಂಭವು ಸಿದ್ಧಗಂಗಾ ಮಠದಲ್ಲಿ ನಡೆಯಲಿದೆ. ಗೋಕರ್ಣದ ಮಹಾಬಲೇಶ್ವರ ದೇವಾಲಯದ ಆಡಳಿತವನ್ನು ಸರ್ಕಾರ 2008 ರಲ್ಲಿ ಶ್ರೀ ರಾಮ ಚಂದ್ರಾಪುರ ಮಠಕ್ಕೆ ಪುನಃ ಹಸ್ತಾಂತರಿಸಿದ ನಂತರ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕವಾಗಿ ಹಲವು ಧನಾತ್ಮಕ ಬದಲಾವಣೆಗಳನ್ನು ಮಾಡಲಾಗಿದ್ದು, ಸಮಾಜಕ್ಕೆ ಸೇವೆ ಸಲ್ಲಿಸಿದ ಸಾಧಕರಿಗೆ ಪ್ರತಿವರ್ಷ ಮಹಾಬಲೇಶ್ವರ ದೇವರ ಅನುಗ್ರಹ ರೂಪದ 'ಸಾರ್ವಭೌಮ ಪ್ರಶಸ್ತಿಯನ್ನು ನೀಡಿ ಗೌರವಿಸಿ ಪ್ರೋತ್ಸಾಹಿಸಲಾಗುವುದು. ತ್ರಿವಿಧ ದಾಸೋಹದ ಮೂಲಕ ಸಾಮಾಜಿಕ ಸೇವೆ ಸಲ್ಲಿಸಿದ ಶತಾಯುಷಿ ಕಾಯಕಯೋಗಿ ಸಿದ್ಧಗಂಗಾ ಮಠದ ಡಾ.ಶ್ರೀ ಶಿವಕುಮಾರ ಮಹಾಸ್ವಾಮಿಗಳಿಗೆ ಈ ವರ್ಷದ 'ಸಾರ್ವಭೌಮ ಪ್ರಶಸ್ತಿ ನೀಡಲಾಗುತ್ತಿದೆ.ಗೋಕರ್ಣದ ಮಹಾಶಿವರಾತ್ರಿಯ ಕಾರ್ಯಕ್ರಮದ ಸಂದರ್ಭದಲ್ಲಿ ಸಿದ್ಧಗಂಗಾ ಶ್ರೀಗಳಿಗೆ ಪ್ರಶಸ್ತಿಯನ್ನು ಘೋಷಿಸಿದ್ದು, ಇಂದು ಸಂಜೆ 4 ಗಂಟೆಗೆ ಸಿದ್ಧಗಂಗಾ ಮಠದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಜಗದ್ಗುರು ಶಂಕರಾಚಾರ್ಯ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮಿಗಳು ಸಾರ್ವಭೌಮ ಪ್ರಶಸ್ತಿಯನ್ನು ನೀಡಲಿದ್ದಾರೆ. ಸಿದ್ಧಗಂಗಾ ಮಠದ ಕಿರಿಯ ಶ್ರೀಗಳಾದ ಶ್ರೀ ಸಿದ್ಧಲಿಂಗ ಸ್ವಾಮಿಗಳು, ಚಿಕ್ಕತೊಟ್ಲುಕೆರೆ ಶ್ರೀಕ್ಷೇತ್ರದ ಶ್ರೀ ಅಟವಿ ಶಿವಲಿಂಗ ಮಹಾಸ್ವಾಮಿಗಳು, ಅಂಕನಹಳ್ಳಿ ಮಠದ ಶ್ರೀ ಬಸವಮಹಾಲಿಂಗಸ್ವಾಮಿಗಳು, ತಂಗನಹಳ್ಳಿ ಶ್ರೀ ಮನ್ನಿರಂಜನ ಪ್ರಣವಸ್ವರೂಪಿ ಚರಮೂರ್ತಿ ಶ್ರೀ ಬಸವಲಿಂಗ ಸ್ವಾಮಿಗಳು ದಿವ್ಯ ಸಾನಿಧ್ಯ ವಹಿಸಲಿದ್ದು, ಶ್ರೀ ರಾಮಚಂದ್ರಾಪುರ ಮಠ ಹಾಗೂ ಸಿದ್ಧಗಂಗಾ ಮಠದ ಪದಾಧಿಕಾರಿಗಳು, ಭಕ್ತರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.



## ಪೌರ ಕಾರ್ಮಿಕರ ಮಕ್ಕಳಿಗೆ ಪ್ರೋತ್ಸಾಹ ಧನ

**ಬೆಂಗಳೂರು**

ಪೌರಕಾರ್ಮಿಕರ ಮಕ್ಕಳು ಎಸ್.ಎಸ್.ಎಲ್.ಸಿ ನಂತರದ ವ್ಯಾಸಂಗವನ್ನು ಮುಂದುವರಿಸಿದರೆ ಅಂತಹ ಕುಟುಂಬಕ್ಕೆ 2000 ರೂ ಪ್ರೋತ್ಸಾಹ ಧನ ನೀಡಲು ಸರ್ಕಾರ ಚಿಂತನೆ ನಡೆಸಿದೆ ಎಂದು ಸಮಾಜ ಕಲ್ಯಾಣ ಸಚಿವ ಹೆಚ್.ಆಂಜನೇಯ ತಿಳಿಸಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಅವರು, ಇಂತಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡುತ್ತಿದ್ದು, ಜತೆಗೆ ಮಕ್ಕಳನ್ನು ಪೋಷಿಸಲು ಬೇಕಾದ ಹೆಚ್ಚುವರಿ ವೆಚ್ಚವನ್ನು ನಿರ್ವಹಿಸಲು ಕುಟುಂಬಕ್ಕೆ ಅನುಕೂಲವಾಗಲಿ ಎಂಬ ಕಾರಣಕ್ಕಾಗಿ ಈ ಯೋಜನೆಯನ್ನು ಜಾರಿಗೆ ತರಲು ಸರ್ಕಾರ ಚಿಂತನೆ ನಡೆಸುತ್ತಿದೆ ಎಂದು ವಿವರಿಸಿದರು.

ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಜಾರಿಗೆ ಬಂದ ನಂತರ ಸಂಕಷ್ಟದಲ್ಲಿರುವ ಬಹುತೇಕ ಎಲ್ಲ ಸಮುದಾಯಗಳಿಗೂ ನೆರವಿನ ಹಸ್ತ ಚಾಚಲಾಗಿದೆ.ಇದೇ ರೀತಿ ಪೌರ ಕಾರ್ಮಿಕರ ಮಕ್ಕಳಿಗಾಗಿ ಈ ಹೊಸ ಯೋಜನೆಯ ರೂಪು ರೇಷೆಯನ್ನು ತಯಾರಿಸ ಲಾಗುತ್ತಿದೆ ಎಂದರು. ನಾವು ಎಷ್ಟೇ ಬೆಂಬಲ ನೀಡುತ್ತಾ ಬಂದಿದ್ದರೂ ಬಹುತೇಕ ಮಂದಿ ಎಸ್.ಎಸ್.ಎಲ್.ಸಿ. ನಂತರದ ವ್ಯಾಸಂಗವನ್ನು ಮುಂದುವರಿಸುತ್ತಿಲ್ಲ. ಇದಕ್ಕೆ ಆರ್ಥಿಕ ಸಂಕಷ್ಟವೇ ಮುಖ್ಯ ಕಾರಣ. ಹೀಗಾಗಿ ಪೌರಕಾರ್ಮಿಕರ ಮಕ್ಕಳು ಎಸ್.ಎಸ್.ಎಲ್.ಸಿ. ನಂತರದ ವ್ಯಾಸಂಗವನ್ನು ಮುಂದುವರಿಸಿದರೆ ಅವರ ಬದುಕಿನ ನಿರ್ವಹಣೆಗಾಗಿ ಹೆಚ್ಚುವರಿಯಾಗಿ ಎರಡು ಸಾವಿರ ರೂಗಳನ್ನು ನೀಡಲು ಸರ್ಕಾರ ಸಜ್ಜಾಗಿದೆ.

## ಸಮವಸ್ತ್ರ ಖರೀದಿಯಲ್ಲಿ ಭ್ರಷ್ಟಾಚಾರ ನಡೆದರೆ ಶಿಸ್ತು ಕ್ರಮ

**ಶಿರಾ**

ಶಾಲಾ ಸಮವಸ್ತ್ರಗಳ ಖರೀದಿಗೆ ಸಂಬಂಧಪಟ್ಟಂತೆ ರಾಜ್ಯ ಸರ್ಕಾರವು ಸಮವಸ್ತ್ರ ಖರೀದಿಗೆ ಆಯಾ ಶಾಲಾ ಎಸ್.ಡಿ.ಎಂ.ಸಿ.ಗೆ ಸಂಪೂರ್ಣವಾದ ಅಧಿಕಾರ ನೀಡಿದ್ದು ಈ ಪರಮಾಧಿಕಾರವನ್ನು ಶಿಕ್ಷಣ ಇಲಾಖೆ ಕಸಿದುಕೊಂಡರೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ತಾ.ಪಂ. ಅಧ್ಯಕ್ಷೆ ಹಂಸವೇಣಿ ಶ್ರೀನಿವಾಸ್ ಶಿಕ್ಷಣ ಇಲಾಖೆಯ ಅಧಿಕಾರಿಗೆ ತಾಕೀತು ಮಾಡಿದರು.

ನಗರದ ತಾ.ಪಂ. ಕಚೇರಿಯ ಸಭಾಂಗಣದಲ್ಲಿ ಸೋಮವಾರ ನಡೆದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಶಾಲಾ ಮಕ್ಕಳಿಗೆ ಸಮವಸ್ತ್ರ ಖರೀದಿಗೆ ಸಂಬಂಧಿಸಿದಂತೆ ಎಸ್.ಡಿ.ಎಂ.ಸಿ. ತನ್ನದೇ ಆದ ಪರಮಾಧಿಕಾರ ಹೊಂದಿದೆ. ಇದನ್ನು ಬಿಟ್ಟು ಆ ಶಾಲಾ ವೃತ್ತದ ಕೆಲ ಸಿ.ಆರ್.ಪಿ.ಗಳ ಒತ್ತಡದಿಂದ ಎಲ್ಲಾ ಶಾಲೆಗಳಿಗೆ ಒಬ್ಬನೇ ಗುತ್ತಿಗೆದಾರನಿಂದ ಸಮವಸ್ತ್ರ ನೀಡಲು ಟೆಂಡರ್ ಕರೆದು ಖರೀದಿ ಮಾಡುವ ಕಾನೂನು ಬಾಹಿರ ಚಟುವಟಿಕೆ ನಡೆಯುತ್ತಿದ್ದು ಇದು ಎಷ್ಟರಮಟ್ಟಿಗೆ ಸರಿ ? ಎಂದು ಅಧ್ಯಕ್ಷರು ಪ್ರಶ್ನಿಸಿದರು.

ಸದರಿ ವಿಚಾರ ಸಭೆಯಲ್ಲಿ ಪ್ರಸ್ತಾಪವಾದಾಗ ಅಧ್ಯಕ್ಷರ ಮಾತಿಗೆ ಬೆಂಬಲ ಸೂಚಿಸಿದ ತಾ.ಪಂ. ಉಪಾಧ್ಯಕ್ಷ ರಂಗನಾಥಗೌಡ ಹಾಗೂ ಸ್ಥಾಯಿ ಸಮಿತಿಯ ಅಧ್ಯಕ್ಷ ತಿಮ್ಮಯ್ಯ ಮಾತನಾಡಿ ಸಮವಸ್ತ್ರ ಖರೀದಿಯ ವಿಚಾರವನ್ನು ಎಸ್.ಡಿ.ಎಂ.ಸಿ.ಯವರೇ ನೋಡಿಕೊಳ್ಳಲಿ. ಅದರ ವಿಚಾರದಲ್ಲಿ ಶಿಕ್ಷಣ ಇಲಾಖೆ ಮೂಗು ತೂರಿಸಕೂಡದು ಎಂದರು.

ಈ ಹಿಂದೆ ಸಮವಸ್ತ್ರ ಖರೀದಿ ವಿಚಾರದಲ್ಲಿ ವ್ಯಾಪಕ ಭ್ರಷ್ಟಾಚಾರಗಳು ನಡೆದ ಬಗ್ಗೆ ನಮಗೆ ಮಾಹಿತಿ ಇದೆ. ಒಬ್ಬನೇ ಟೆಂಡರ್

>>> 6ನೇ ಪುಟಕ್ಕೆ

### ಕೇಂದ್ರ ಸರ್ಕಾರಿ ಯೋಜನೆಗಳ ಪ್ರಚಾರದ ಅಭಿಯಾನಕ್ಕೆ ಚಾಲನೆ

## ನಗರದಲ್ಲಿ ಮೂರು ದಿನಗಳ 'ಮೋದಿ ಫೆಸ್ಟ್'

**ತುಮಕೂರು**

ನರೇಂದ್ರ ಮೋದಿ ನೇತೃತ್ವದ ಎನ್.ಡಿ.ಎ. ಸರ್ಕಾರದ ಸಾಧನೆಯನ್ನು ಎಲ್ಲರಿಗೂ ತಲುಪಿಸುವ ಸಲುವಾಗಿ ಕೇಂದ್ರದ ಯೋಜನೆಗಳನ್ನು ಪ್ರಚಾರ ಮಾಡುವ ಎಲ್.ಇ.ಡಿ. ವಾಹನಕ್ಕೆ ಸಿದ್ಧಗಂಗಾ ಮಠದಲ್ಲಿ ಚಾಲನೆ ನೀಡಲಾಯಿತು. ಮೂರು ದಿನಗಳ ಕಾಲ ಜಿಲ್ಲಾದ್ಯಂತ ಸಂಚರಿಸುವ ಈ ಎಲ್.ಇ.ಡಿ. ವಾಹನಕ್ಕೆ ಶ್ರೀ ಸಿದ್ಧಲಿಂಗ ಸ್ವಾಮಿಗಳು ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಬಿ.ಜೆ.ಪಿ. ಜಿಲ್ಲಾಧ್ಯಕ್ಷ ಜಿ.ಬಿ.ಜ್ಯೋತಿಗಣೇಶ್ ಕೇಂದ್ರ ಸರ್ಕಾರವು ಹಲವು ಯೋಜನೆಗಳನ್ನು ಜಾರಿಗೆ ತಂದಿದೆ. ಇವುಗಳ ಪ್ರಯೋಜನ ಎಲ್ಲ ಜನತೆಗೂ ಸಿಗಬೇಕು ಎಂಬ ಆಶಯ ಕೇಂದ್ರ ಸರ್ಕಾರದ್ದಾಗಿದೆ. ಆದ ಕಾರಣ ಇಂದಿನಿಂದ ಮೂರು ದಿನಗಳ ಕಾಲ ಕೇಂದ್ರ ಸರ್ಕಾರದ ಸಾಧನೆಗಳನ್ನು ಬಿಂಬಿಸುವ ಎಲ್.ಇ.ಡಿ. ವಾಹನ ತುಮಕೂರು ನಗರ ಹಾಗೂ ಜಿಲ್ಲೆಯಲ್ಲಿ ಸಂಚರಿಸಲಿದೆ. ಜೂನ್ 6 ರಿಂದ 8ರವರೆಗೆ ಈ ಪ್ರಚಾರದ ವಾಹನ ಓಡಾಡಲಿದೆ ಎಂದರು. ಕೇಂದ್ರ ಸರ್ಕಾರವು ರಾಷ್ಟ್ರದ ಎಲ್ಲ ಜನರಿಗಾಗಿ ಮತ್ತು ಬಡವರಿಗಾಗಿ ಹಲವು ಯೋಜನೆಗಳನ್ನು ಪರಿಚಯಿಸಿದೆ. ಮುದ್ರಾ ಯೋಜನೆ, ಫಸಲ್ ಭೀಮಾ ಯೋಜನೆ ಸೇರಿದಂತೆ ಹಲವು ಯೋಜನೆಗಳ ಫಲ ಎಲ್ಲರಿಗೂ ಸಿಗಬೇಕು. ವಿಶೇಷವಾಗಿ ಗ್ರಾಮೀಣ ಪ್ರದೇಶದ ರೈತಾಪಿ ವರ್ಗಕ್ಕೆ ಈ ಯೋಜನೆಗಳ ಅರಿವು ಉಂಟಾಗಬೇಕು. ಆಗ ಮಾತ್ರ ಸರ್ಕಾರದ ಉದ್ದೇಶ ಈಡೇರಿದಂತಾಗುತ್ತದೆ. ಅದಕ್ಕಾಗಿ ಗ್ರಾಮೀಣ ಪ್ರದೇಶದ ಜನರಿಗೆ ಹೆಚ್ಚು ಅರಿವು ಮೂಡಿಸುವ ಕೆಲಸ ಮಾಡಲಾಗುತ್ತದೆ ಎಂದರು.

ಜೂನ್ 9 ರಿಂದ 11ರವರೆಗೆ ತುಮಕೂರು ನಗರದಲ್ಲಿ ಮೋದಿ ಫೆಸ್ಟ್ ಕಾರ್ಯಕ್ರಮ ಆಯೋಜಿಸಲಾಗಿದೆ. ಕೇಂದ್ರ ಸರ್ಕಾರಿ ಕಾರ್ಯಕ್ರಮ ಇದಾಗಿದ್ದು, ಬಿಜೆಪಿ ಪಕ್ಷದ ವತಿಯಿಂದ ಸಹಕಾರ ನೀಡಲಾಗುತ್ತಿದೆ. ಮೂರು ದಿನಗಳ ಕಾಲ ನಡೆಯುವ ಈ ಮೋದಿ ಫೆಸ್ಟ್ ಕಾರ್ಯಕ್ರಮಕ್ಕೆ ಕೇಂದ್ರ ಸರ್ಕಾರದ ಅಧಿಕಾರಿಗಳು, ಜಿಲ್ಲಾ ಮಟ್ಟದ ಅಧಿಕಾರಿಗಳು ಭಾಗವಹಿಸಲಿದ್ದಾರೆ. ಇದರಲ್ಲಿ ವಿವಿಧ ಯೋಜನೆಗಳ ಫಲಾನುಭವಿಗಳು ಪಾಲ್ಗೊಂಡು ಅವರೊಂದಿಗೆ ಸಂವಾದ ನಡೆಯಲಿದೆ ಎಂದರು.

ಮಾಜಿ ಸಂಸದ ಜಿ.ಎಸ್.ಬಸವರಾಜು ಮಾತನಾಡಿ ಸ್ಕಿಲ್ ಇಂಡಿಯಾ ಯೋಜನೆಯ ಮೂಲಕ ನರೇಂದ್ರ

>>> 6ನೇ ಪುಟಕ್ಕೆ



ಕೇಂದ್ರ ಸರ್ಕಾರದ ಯೋಜನೆಗಳ ಪ್ರಚಾರಾಂದೋಲನದ ಮೋದಿ ಫೆಸ್ಟ್ ಹೆಸರಿನ 3 ದಿನಗಳ ಕಾರ್ಯಕ್ರಮಕ್ಕೆ ಸಿದ್ದಗಂಗಾ ಮಠದಲ್ಲಿ ಶ್ರೀ ಸಿದ್ದಲಿಂಗ ಸ್ವಾಮಿಗಳು ಚಾಲನೆ ನೀಡಿದರು.

## ಮಾಧ್ಯಮಕ್ಕೆ ಸ್ವಯಂ ನಿಯಂತ್ರಣ ಅಗತ್ಯ

### ಮಾಧ್ಯಮ ಸ್ವಾತಂತ್ರ್ಯ ಆಯಾಮಗಳು ಕುರಿತ ಸಂವಾದ

**ಬೆಂಗಳೂರು**

ಸಾರ್ವಜನಿಕ ವಿಶ್ವಾಸಾರ್ಹತೆ ಉಳಿಸಿಕೊಂಡು ಹೆಚ್ಚಿನ ಸಮಾಜ ಸೇವೆಗೆ ಅಣಿಯಾಗಲು ಪತ್ರಕರ್ತರು ಸ್ವಯಂ ನಿಯಂತ್ರಣ ಅಂಶಗಳನ್ನು ಪಾಲಿಸಬೇಕಾದ ಅನಿವಾರ್ಯತೆ ಇದೆ.

ನಗರದ ಕಸಾಪ ಸಭಾಂಗಣದಲ್ಲಿ ಖಾದ್ರಿ ಶಾಮಣ್ಣ ಸ್ಮಾರಕ ಟ್ರಸ್ಟ್ ಹಾಗೂ ಮಂಡ್ಯ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ಏರ್ಪಡಿಸಿದ್ದ 'ಮಾಧ್ಯಮ ಸ್ವಾತಂತ್ರ್ಯ ಹೊಸ ಆಯಾಮಗಳು' ಸಂವಾದದಲ್ಲಿ ಕೇಳಿ ಬಂದ ಒಟ್ಟಾರೆ ಅಭಿಮತ ಇದು.ಹಿರಿಯ ಪತ್ರಕರ್ತರಾದ ಟಿಕೆ ತ್ಯಾಗರಾಜ್, ದೀಪಾ ಬಾಲಕೃಷ್ಣನ್ ಮತ್ತು ವೀರನಾರಾಯಣ್ ಸಂವಾದದಲ್ಲಿ ಪಾಲ್ಗೊಂಡು ಮಾತನಾಡಿ, ಇತ್ತೀಚಿಗೆ ಈ ಕ್ಷೇತ್ರದಲ್ಲಿ ಕಂಡು ಬಂದ ಕೆಲ ಘಟನಾವಳಿಗಳು ಹಾಗೂ ಮಾಧ್ಯಮದ ಮೇಲೆ ನಿಯಂತ್ರಣ ಹೇರಲು ಶಾಸನ ಸಭೆಯಲ್ಲಿ ನಡೆದ ಪ್ರಹಸನಗಳನ್ನು ಉಲ್ಲೇಖಿಸಿ ಆತಂಕ ವ್ಯಕ್ತಪಡಿಸಿದರು.

**ಟಿವಿ ಸುದ್ದಿಗಳಲ್ಲಿ ಪೈಪೋಟಿ ಹೆಚ್ಚಾಗಿ ಜನರ ವಿಶ್ವಾಸಾರ್ಹತೆ ಕುಂದುತ್ತಿದೆ, ಸುದ್ದಿ ಮೂಲದ ನಿಖರತೆ ಖಚಿತ ಪಡಿಸಿಕೊಂಡು ವಾಹಿನಿಗಳು ಸುದ್ದಿ ಪ್ರಸಾರ ಮಾಡುವ ಅವಶ್ಯಕತೆ ಇದೆ. ಈ ನಿಟ್ಟಿನಲ್ಲಿ ಹೆಚ್ಚಿನ ಸಂವಾದ, ಸಂಘ ಟನೆ, ಕಾರ್ಯಾಗಾರ ನಡೆಯಬೇಕಾಗಿದೆ, ಕಡಿಮೆ ಬೆಲೆಗೆ ಪತ್ರಿಕೆ ಮಾರಾಟ ತಡೆಯಬೇಕಿದೆ. ಇದರಿಂದ ಆಡಳಿತ ಪತ್ರಿಕೋದ್ಯಮವನ್ನು ನಿಯಂತ್ರಿಸಬಹುದು.**



'ಖಾದ್ರಿ ಶಾಮಣ್ಣ ಸ್ಮಾರಕ ಟ್ರಸ್ಟ್' ಹಾಗೂ 'ಮಂಡ್ಯ ಜಿಲ್ಲಾ ಪತ್ರಕರ್ತರ ಸಂಘ' ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ಲೋಕಶಿಕ್ಷಣ ಟ್ರಸ್ಟ್'ನ ಪ್ರಕಟಣೆಗಳ ಸಮೂಹ ಸಂಪಾದಕರಾದ ಹುಣಸವಾಡಿ ರಾಜನ್ ಅವರಿಗೆ 'ಖಾದ್ರಿ ಶಾಮಣ್ಣ ಪತ್ರಿಕೋದ್ಯಮ ಪ್ರಶಸ್ತಿ'ಯನ್ನು ಹಿರಿಯ ಪತ್ರಕರ್ತರಾದ ಇಮ್ರಾನ್ ಖುರೇಶಿ ಪ್ರದಾನ ಮಾಡಿದರು. ಈ ಸಂದರ್ಭದಲ್ಲಿ ವಿಜಯಮ್ಮ, ಸುಮನ್ ಖಾದ್ರಿ, ಸಂಸ್ಥೆಯ ಕಾರ್ಯದರ್ಶಿ ಖಾದ್ರಿ ಅಚ್ಯುತನ್ ಉಪಸ್ಥಿತರಿದ್ದರು.

ಖಾಸಗಿ ವಾಹಿನಿಗಳು ಸಾರ್ವಜನಿಕ ಬದುಕನ್ನ ಬೀದಿಗೆ ತರುತ್ತಿವೆ. ಇದೇ ನೆಪ ಇಟ್ಟುಕೊಂಡು ರಾಜಕಾರಣಿಗಳು ಮಾಧ್ಯಮದ ಮೇಲೆ ನಿಯಂತ್ರಣ ಹೇರಲು ಮುಂದಾಗುತ್ತಿವೆ, ಒಂದು ಕಡೆ ಮಾಧ್ಯಮಗಳ ನಿಯಂತ್ರಣಕ್ಕೆ ಆಡಳಿತದ ಪ್ರಯತ್ನ ಮುಂದುವರಿದರೆ ಮತ್ತೊಂದೆಡೆ ಮಾಧ್ಯಮಗಳು ಸತ್ಯ, ಸುಳ್ಳು ಪರಾಮರ್ಶಿಸದೆ ಸುದ್ದಿ ಪ್ರಕಟಿಸಿ ತಾವೇ ತೀರ್ಪು ಪ್ರಕಟಿಸುತ್ತಿವೆ. ತಿಳಿದ ಮಾಹಿತಿಯೇ ಸತ್ಯ ಎಂದು ಬಿಂಬಿಸಿ ನಿರ್ಣಯಕ್ಕೆ ಬರುವ ಪರಿಸ್ಥಿತಿ ಇದೆ ಎಂದು ಹೇಳಿದರು.

ಒಕ್ಕೂಟ ವ್ಯವಸ್ಥೆ ಮುಂದುವರಿಸುವ ನಾಯಕ ಬೇಕು, ಒಡೆಯುವವರು ಬೇಡ. ಆಹಾರ ಪದ್ಧತಿ ಪ್ರಶ್ನಿಸಬಾರದೆ. ಇದೇ ಕಾರಣಕ್ಕೆ ಎನ್‌ಡಿ ಟಿವಿ ಮೇಲೆ ಭೂತದ ನೆರಳು ಕಾಡುತ್ತಿದೆ ಎಂದು ಎನ್‌ಡಿ ಟಿವಿ ಮೇಲಿನ ಐಟಿ ದಾಳಿ ಉಲ್ಲೇಖಿಸಿ ಕೇಂದ್ರ ಸರ್ಕಾರದ ಕೆಲ ಕ್ರಮಗಳನ್ನು ಅವಲೋಕಿಸಿದರೆ ಪತ್ರಿಕಾ ರಂಗದ ಮೇಲೂ ಅದರ ಕಾಕದೃಷ್ಟಿ ಬಿದ್ದಂತಿದೆ. ಜನರ ಅಭಿಪ್ರಾಯವನ್ನು ಬಿಂಬಿಸುವುದೇ ತಪ್ಪೆಂದು ಕೇಂದ್ರ ಸರ್ಕಾರ ವರ್ತಿಸುತ್ತಿದೆ ಎಂದು ಕಿಡಿಕಾರಿದರು.

>>> 10ನೇ ಪುಟಕ್ಕೆ

Sri Rajarajeshwari Public School
(Affiliated to Central Board of Secondary Education, Delhi)
Heggunda, Near Dabaspet, Nelamangala Taluk, Bengaluru Rural Dist - 562111
Mob: 9731291105/9844175572 E-mail: srpsheggunda@gmail.com
HEARTY CONGRATULATION FROM MANAGEMENT, PRINCIPAL, HEAD MISTRESS & STAFF FOR THEIR PERFORMANCE



CBSE 10th RESULT 2016-17 100%
MONISHA.M CGPA -10
MEGHANA.V.S CGPA -10
RAMYA.H.N CGPA -10
TEJASWINI.S CGPA -10
NITHYASHREE.M.N CGPA -10
MYTHRA.B.L CGPA -10
THWITHIKSHA.P CGPA -10
LIKITHA BAI Y.A. CGPA -10
SHEETHAL JAIN.Y.N CGPA -10
RAMYA.M.S CGPA -9.8
KOUSHIK.M CGPA -9.6
VINAY.H.S CGPA -9.4
MANISH CHAUDHURY CGPA -9.4
SUMANTH.H.R CGPA -9.2
RAVISHANKAR.D.S CGPA -9.0
NAVYASHREE.R CGPA -8.8
LIKITH.R CGPA -8.6
LIKITH KUMAR.H.T CGPA -8.2
SANDEEP.M.K CGPA -8.0
SAHIL CGPA -8.0
TOTAL APPEARED -20
Distinction -20
Admission Open
Management